## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನಬಾರ್ಡ್ ಆರ್‌ಐಡಿಎಫ್- 19 ಮತ್ತು 20 ರಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗಾಗಿ ಪ್ರಸಕ್ತ 2016-17ನೇ ಸಾಲಿನಲ್ಲಿ ತೃತೀಯ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:149/1:ಆರ್‌ಆರ್‌ಸಿ: 2012, ದಿನಾಂಕ:09.10.2013.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:40:ಆರ್‌ಆರ್‌ಸಿ: 2014, ದಿನಾಂಕ: 28.04.2014.
3. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ಗ್ರಾಅಪ:149/5: ಆರ್‌ಆರ್‌ಸಿ:2012, ದಿ;25.11.2014.
4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:85:ಆರ್‌ಆರ್‌ಸಿ:14, ದಿನಾಂಕ:14-10-2014.
5. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:31:ಆರ್‌ಆರ್‌ಸಿ:2015, ದಿ:06.03.2015.
6. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:31/1:ಆರ್‌ಆರ್‌ಸಿ: 2015, ದಿ:08.04.2015.
7. ಆರ್ಥಿಕ ಇಲಾಖೆಯ ಆದೇಶ ಸಂ:ಎಫ್‌ಡಿ:03:ಬಿಎಫ್‌ಪಿ:2016 ದಿನಾಂಕ:2-4-2016.
8. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂರಾ ರವರು ಸಂ:ಗ್ರಾಅಪ:590:ಪಿಬಿಎಸ್:2016 ದಿನಾಂಕ:18-11-2016.

**ಪ್ರಸ್ತಾವನೆ:**

ನಬಾರ್ಡ್ ಸಂಸ್ಥೆಯ ನೆರವಿನಡಿ ಆರ್‌ಐಡಿಎಫ್- 19 ರಡಿ ಮೇಲೆ ಓದಲಾದ (1), (2) ಮತ್ತು (3)ರ ಸರ್ಕಾರಿ ಆದೇಶದಲ್ಲಿ 391 ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ರೂ.14095.43ಲಕ್ಷಗಳಿಗೆ ಹಾಗೂ ಆರ್‌ಐಡಿಎಫ್-20 ರಡಿ ಮೇಲೆ ಓದಲಾದ (4), (5) ಮತ್ತು (6)ರ ಸರ್ಕಾರಿ ಆದೇಶಗಳಲ್ಲಿ 449 ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ರೂ.21380.00 ಲಕ್ಷಗಳಿಗೆ ಅನುಮೋದನೆ ನೀಡಲಾಗಿದೆ.

ಜಿಲ್ಲಾ ಪಂಚಾಯತಿಗಳು ಅನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳಿಗಾಗಿ ಪ್ರಸ್ತುತ 2016-17ನೇ ಸಾಲಿನಲ್ಲಿ ಪ್ರಗತಿ ಹೊಂದಿದ ಕಾಮಗಾರಿಗಳ ಬಾಕಿ ಬಿಲ್ಲುಗಳ ತೀರುವಳಿಗೆ ಹಣ ಬಿಡುಗಡೆ ಮಾಡುವಂತೆ ಜಿಲ್ಲಾ ಪಂಚಾಯತಿಗಳು, ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ರವರ ಮುಖಾಂತರ ಬೇಡಿಕೆ ಸಲ್ಲಿಸಿದ ಮೇರೆಗೆ ಪ್ರಸ್ತುತ 2016-17ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ರೂ.9484.00ಲಕ್ಷಗಳಲ್ಲಿ ಪ್ರಥಮ ಹಾಗೂ ದ್ವಿತೀಯ ತ್ರೈಮಾಸಿಕ ಅನುದಾನ ಸೇರಿ ಒಟ್ಟು ರೂ.47.42 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ನಬಾರ್ಡ-19ರ ಮಾಲಿಕೆಯಡಿ ಕಾಮಕಾರಿಗಳಿಗೆ ರೂ.725.00 ಲಕ್ಷಗಳು ಅನುಬಂಧ-1ರಂತೆ ಹಾಗೂ ನಬಾರ್ಡ್-20ರ ಮಾಲಿಕೆಯಡಿ ಕಾಮಗಾರಿಗಳಿಗೆ ರೂ.1646.00 ಲಕ್ಷಗಳು ಅನುಬಂಧ-2ರಂತೆ ಸೇರಿ ಒಟ್ಟು ರೂ.2371.00ಲಕ್ಷಗಳನ್ನು ಮೂರನೇ ಕಂತನ್ನಾಗಿ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆಗೊಳಿಸಲು ಸರ್ಕಾರವು ತೀರ್ಮಾನಿಸಿದೆ.

ಆದ್ದರಿಂದ ಈ ಆದೇಶ

**<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:47/2:ಆರ್‌ಆರ್‌ಸಿ:2016, ಬೆಂಗಳೂರು, ದಿನಾಂಕ:06.12.2016.</u>**

ನಬಾರ್ಡ್ ಆರ್‌ಐಡಿಎಫ್-19 ಮತ್ತು 20ರ ರಡಿಯಲ್ಲಿ ಜಿಲ್ಲಾ ಪಂಚಾಯತಿಗಳು ಕೈಗೆತ್ತಿಕೊಂಡಿದ್ದು, ಪ್ರಗತಿಹೊಂದಿರುವ ಗ್ರಾಮೀಣ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗಾಗಿ ಅನುಕ್ರಮವಾಗಿ ರೂ.725.00 ಲಕ್ಷಗಳು ಹಾಗೂ ರೂ.1646.00 ಲಕ್ಷಗಳು ಸೇರಿ ಒಟ್ಟಾರೆ ರೂ.2371.00ಲಕ್ಷಗಳನ್ನು (ರೂಪಾಯಿಗಳು ಎರಡು ಸಾವಿರದ ಮುನ್ನೂರ ಎಪ್ಪತ್ತೊಂದು ಲಕ್ಷಗಳು

ಮಾತ್ರ) ಲೆಕ್ಕ ಶೀರ್ಷಿಕೆ-5054-03-337-0-74-436-ನಬಾರ್ಡ್ ಕಾಮಗಾರಿಗಳು ರಡಿ ಅನುಬಂಧ-1 ಮತ್ತು 2 ರಲ್ಲಿ ತೋರಿಸಿರುವಂತೆ ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ. ಬಿಡುಗಡೆ ಮಾಡಿರುವ ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ವಿನಿಯೋಗಿಸಲು ಆದೇಶಿಸಿದೆ.

**ಷರತ್ತುಗಳು**

1. ಈ ಅನುದಾನವನ್ನು ಅನುಮೋದನೆಯಾದ ನಬಾರ್ಡ್ ಮಾಲಿಕೆಯ ಕಾಮಗಾರಿಯ ಹೊರತು ಬೇರೆ ಯಾವುದೇ ಕಾಮಗಾರಿಗಳಿಗೆ ಉಪಯೋಗಿಸಬಾರದು. ಮುಂದುವರೆಯುತ್ತಾ, ಯಾವುದೇ ನಬಾರ್ಡ್ ಮಾಲಿಕೆಯಡಿ ಕಾಮಗಾರಿಗಳು ಅನುಮೋದನೆಗೊಂಡಿದಲ್ಲಿ, ಇನ್ಯಾವುದೇ ಮಾಲಿಕೆಯಡಿ ಬಿಡುಗಡೆಗೊಳಿಸಲಾಗಿರುವ ಅನುದಾನವನ್ನು ಅವಶ್ಯಕತೆ ಹಾಗೂ ಆದ್ಯತೆ ಮೇರೆಗೆ ವಿನಿಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

2. **ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆರವರು ನಬಾರ್ಡ್ ಯೋಜನೆಯ ಎಲ್ಲಾ ಅನುಮೋದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುವುದು ಹಾಗೂ ಅನುಷ್ಠಾನಗೊಂಡ ಕಾಮಗಾರಿಗಳ ಮರುಪಾವತಿ ಬಿಲ್ಲುಗಳನ್ನು ಕಾರ್ಯಪಾಲಕ ಅಭಿಯಂತರರಿಂದ ಪಡೆದು ಸರ್ಕಾರಕ್ಕೆ ಸಲ್ಲಿಸುವುದು ಮತ್ತು ಸರ್ಕಾರಕ್ಕೆ ಕಾಲಕಾಲಕ್ಕೆ ಪ್ರಗತಿಯ ವರದಿಯನ್ನು ನೀಡತಕ್ಕದ್ದು.**

3. ಈ ಕಾರ್ಯಕ್ರಮದಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಅನುದಾನದಲ್ಲಿ ಭರಿಸಿದ ವೆಚ್ಚಕ್ಕೆ ಅನುಗುಣವಾಗಿ ನಬಾರ್ಡ್ ಮರುಪಾವತಿ ಕ್ಲೈಮ್ ಬಿಲ್ಲುಗಳನ್ನು ಒಂದು ತಿಂಗಳೊಳಗೆ ಸಲ್ಲಿಸತಕ್ಕದ್ದು.

4. ಬಳಕೆಯಾದ ಹಣ ಹಾಗೂ ಕಾಮಗಾರಿ ಪ್ರಗತಿಯನ್ನು ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಇವರಿಗೆ ಒದಗಿಸತಕ್ಕದ್ದು.

5. ಕಾಮಗಾರಿಗಳ ವಿವರವನ್ನು ನಬಾರ್ಡ್‌ನ ನಿಯಮಗಳಂತೆ ಗ್ರಾಮ ಪಂಚಾಯತಿಯ ಸೂಚನಾ ಫಲಕಗಳಲ್ಲಿ ಹಾಗೂ ಕಾಮಗಾರಿಗಳನ್ನು ನಡೆಸುತ್ತಿರುವ ಸ್ಥಳಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು, ಗ್ರಾಮ ಪಂಚಾಯತಿಯ ಸೂಚನಾ ಫಲಕಗಳಲ್ಲಿ ವಿವರಗಳನ್ನು ಬರೆಸುವ ಜವಾಬ್ದಾರಿ ಆಯಾ ಜಿಲ್ಲಾ ಪಂಚಾಯತಿಯ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳದ್ದಾಗಿರುತ್ತದೆ.

6. ಬಳಕೆಯಾದ ಹಣ ಕುರಿತಂತೆ ಈ ಯೋಜನೆಯಡಿಯ ಎಲ್ಲಾ ಕಾಮಗಾರಿಗಳ Project Completion Report ನ್ನು ಸರ್ಕಾರಕ್ಕೆ ಹಾಗೂ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಒದಗಿಸತಕ್ಕದ್ದು.

7. ಈ ಯೋಜನೆಯ ಎಲ್ಲಾ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿದ ಬಳಿಕ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿ ಮಾಡುವುದು ಕಡ್ಡಾಯವಾಗಿರುತ್ತದೆ.

8. ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿದ ಹಣವನ್ನು ಜಿಲ್ಲಾ ಖಜಾನೆಯು ಪ್ರಸ್ತುತ ವರ್ಷಕ್ಕೆ ನಿಗಧಿಗೊಳಿಸುವ ದಿನಾಂಕದೊಳಗೆ ಡ್ರಾ ಮಾಡಿ ವಿನಿಯೋಗಿಸತಕ್ಕದ್ದು.

9. ಜಿಲ್ಲಾ ಪಂಚಾಯತಿಗಳು ಮುಂದಿನ ತ್ರೈಮಾಸಿನ ಕಂತಿನ ಅನುದಾನ ಬಿಡುಗಡೆ ಬೇಡಿಕೆ ಸಲ್ಲಿಸುವ ಮುನ್ನ ಈ ಆದೇಶದಲ್ಲಿ ಬಿಡುಗಡೆ ಮಾಡಿದ ಶೇಕಡ 75ರಷ್ಟು ವೆಚ್ಚ ಕಡ್ಡಾಯವಾಗಿ ಭರಿಸತಕ್ಕದ್ದು, ಇಲ್ಲದಿದ್ದಲ್ಲಿ ಮುಂದಿನ ಕಂತಿನ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂ:ಎಫ್‌ಡಿ:03:ಟಿಎಫ್‌ಪಿ:2016 ದಿನಾಂಕ:2-4-2016 ರಲ್ಲಿ ಅಧಿಕಾರ ಪ್ರತ್ಯಾಯೋಜಿಸಿದಂತೆ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಕಂಡಿಕೆ ಟಿಪ್ಪಣಿ ಸಂಖ್ಯೆ: ಗ್ರಾಅಪ:590:ಪಿಬಿಎಸ್:2016, ದಿನಾಂಕ: 18-11-2016ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಾ. ಬೂದನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಯನ್ನು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು
2. ಮಹಾಲೇಖಪಾಲರು (ಆಡಿಟ್-1) ಕರ್ನಾಟಕ, ಬೆಂಗಳೂರು
3. ಮಹಾಲೇಖಪಾಲರು (ಆಡಿಟ್-2) ಕರ್ನಾಟಕ, ಬೆಂಗಳೂರು
4. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಗಳು.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಪಿಎಂಯು) (ಐಎಫ್) 5ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ, ಕಟ್ಟಡ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. ಬಹುಮಹಡಿ ಕಟ್ಟಡ, ಬೆಂಗಳೂರು.
11. ವಿಶೇಷಾಧಿಕಾರಿಗಳು, (ಜಿ.ಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
13. ಕರ್ನಾಟಕ ವಿಧಾನ ಸಭೆಯ ಮಾನ್ಯ ವಿರೋದ ಪಕ್ಷದ ನಾಯಕರ ಆಪ್ತಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
14. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
15. ಉಪ ನಿರ್ದೇಶಕರು, ನೆಟ್ ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖಜಾನಾ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
16. ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು.
17. ಅಧೀನ ಕಾರ್ಯದರ್ಶಿ, ವೆಚ್ಚ-6, ಜಿ.ಪಂ, ಆರ್ಥಿಕ ಇಲಾಖೆ, ಬೆಂಗಳೂರು.

18.ಮುಖ್ಯ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು.-9.

19. ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

20.ಸಂಬಂಧಪಟ್ಟ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರರು.

21. ಸಂಬಂಧಪಟ್ಟ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಅಭಿಯಂತರರು.

22.ವೈಬ್‌ಸೈಟ್/ಮಾಹಿತಿಕೇಂದ್ರ-(10 ಪ್ರತಿಗಳು), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. ಬಹುಮಹಡಿ ಕಟ್ಟಡ, ಬೆಂಗಳೂರು.

23.ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಅನುಬಂಧ-1

ನಬಾರ್ಡ್ ಆರ್‌ಐಡಿಎಫ್-19 ರಡಿ ಪ್ರಗತಿ ಹೊಂದಿದ ರಸ್ತೆ ಮತ್ತು ಸೇತುವೆ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಜಿ.ಪಂ.ಗಳಿಗೆ 2016-17ನೇ ಸಾಲಿನ ಲೆಕ್ಕಶೀರ್ಷಿಕೆ-5054-03-337-0-74-436ರಡಿ ಮೂರನೇ ತ್ರೈಮಾಸಿಕ ಅವಧಿಗೆ ಬಿಡುಗಡೆ ಮಾಡಿದ ಅನುದಾನದ ವಿವರ.

**ಸರ್ಕಾರದ ಆದೇಶ ಸಂ:ಗ್ರಾಅಪ:47/2:ಆರ್‌ಆರ್‌ಸಿ:2016, ಬೆಂಗಳೂರು ದಿ:06-12-2016ರ ಲಗತ್ತು**

(ರೂ.ಲಕ್ಷಗಳಲ್ಲಿ)

| ಕ್ರ. ಸ | ಜಿಲ್ಲೆ | ಆರ್‌ಐಡಿಎಫ್-19 ರಸ್ತೆ ಮತ್ತು ಸೇತುವೆ | | ಇಲ್ಲಿಯವರೆಗೂ ಬಿಡುಗಡೆ ಮಾಡಿದ ಮೊತ್ತ | ಈ ಆದೇಶದಲ್ಲಿ ಬಿಡುಗಡೆ ಮಾಡಿದ ಮೊತ್ತ |
|---|---|---|---|---|---|
| | | ಒಟ್ಟು ಸಂಖ್ಯೆ | ಒಟ್ಟು ಅಂದಾಜು ಮೊತ್ತ | | |
| 1 | 2 | 3 | 4 | 5 | 6 |
| 1 | ಬಾಗಲಕೋಟೆ | 38 | 1371.00 | 1371.00 | 200.00 |
| 2 | ಬೆಂಗಳೂರು (ನ) | 10 | 340.00 | 340.00 | 0.00 |
| 3 | ಬೆಂಗಳೂರು (ಗ್ರಾ) | 8 | 205.00 | 200.00 | 0.00 |
| 4 | ಬೆಳಗಾಂ | 62 | 2324.00 | 1785.00 | 150.00 |
| 5 | ಬಳ್ಳಾರಿ | 5 | 299.45 | 299.45 | 0.00 |
| 6 | ಬೀದರ್ | 3 | 200.00 | 200.00 | 0.00 |
| 7 | ಬಿಜಾಪುರ | 15 | 622.50 | 275.00 | 150.00 |
| 8 | ಚಾಮರಾಜನಗರ | 5 | 130.00 | 130.00 | 0.00 |
| 9 | ಚಿಕ್ಕಬಳ್ಳಾಪುರ | 9 | 300.00 | 266.00 | 0.00 |
| 10 | ಚಿಕ್ಕಮಗಳೂರು | 16 | 350.00 | 350.00 | 0.00 |
| 11 | ಚಿತ್ರದುರ್ಗ | 7 | 210.00 | 210.00 | 0.00 |
| 12 | ದಕ್ಷಿಣ ಕನ್ನಡ | 19 | 790.00 | 790.00 | 0.00 |
| 13 | ದಾವಣಗೆರೆ | 3 | 80.00 | 80.00 | 0.00 |
| 14 | ಧಾರವಾಡ | 4 | 175.00 | 175.00 | 0.00 |
| 15 | ಗದಗ | 3 | 300.00 | 300.00 | 0.00 |
| 16 | ಗುಲ್ಬರ್ಗಾ | 11 | 646.00 | 562.50 | 0.00 |
| 17 | ಹಾಸನ | 19 | 615.00 | 612.16 | 0.00 |
| 18 | ಹಾವೇರಿ | 10 | 495.00 | 495.00 | 0.00 |
| 19 | ಕೊಡಗು | 8 | 130.00 | 130.00 | 0.00 |
| 20 | ಕೋಲಾರ | 21 | 445.00 | 435.00 | 0.00 |
| 21 | ಕೊಪ್ಪಳ | 12 | 575.00 | 433.60 | 0.00 |
| 22 | ಮಂಡ್ಯ | 9 | 421.00 | 421.00 | 0.00 |
| 23 | ಮೈಸೂರು | 12 | 445.00 | 338.50 | 100.00 |
| 24 | ರಾಮನಗರ | 9 | 379.48 | 363.00 | 0.00 |
| 25 | ರಾಯಚೂರು | 10 | 425.00 | 425.00 | 0.00 |
| 26 | ಶಿವಮೊಗ್ಗ | 29 | 679.00 | 679.00 | 0.00 |
| 27 | ತುಮಕೂರು | 13 | 506.00 | 174.07 | 100.00 |
| 28 | ಉಡುಪಿ | 4 | 86.00 | 46.00 | 25.00 |
| 29 | ಉತ್ತರ ಕನ್ನಡ | 17 | 551.00 | 551.00 | 0.00 |
| | **ಒಟ್ಟು** | **391** | **14095.43** | **12437.28** | **725.00** |

(ಡಾ. ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

## ಅನುಬಂಧ-2

ನಬಾರ್ಡ್ ಆರ್‌ಐಡಿಎಫ್-20ರಡಿ ಪ್ರಗತಿ ಹೊಂದಿದ ರಸ್ತೆ ಮತ್ತು ಸೇತುವೆ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಜಿ.ಪಂ.ಗಳಿಗೆ 2016-17ನೇ ಸಾಲಿನ ಲೆಕ್ಕಶೀರ್ಷಿಕೆ-5054-03-337-0-74-436ರಡಿ ಮೂರನೇ ತ್ರೈಮಾಸಿಕ ಅವಧಿಗೆ ಬಿಡುಗಡೆ ಮಾಡಿದ ಅನುದಾನದ ವಿವರ.

ಸರ್ಕಾರದ ಆದೇಶ ಸಂ:ಗ್ರಾಅಪ:47/1:ಆರ್‌ಆರ್‌ಸಿ:2016, ಬೆಂಗಳೂರು ದಿ:6-12-2016ರ ಲಗತ್ತು

(ರೂ.ಲಕ್ಷಗಳಲ್ಲಿ)

| ಕ್ರ. ಸ | ಜಿಲ್ಲೆ | ಆರ್‌ಐಡಿಎಫ್-20 ರಸ್ತೆ ಮತ್ತು ಸೇತುವೆ | | ಇಲ್ಲಿಯವರೆಗೂ ಬಿಡುಗಡೆ ಮಾಡಿದ ಮೊತ್ತ | ಈ ಆದೇಶದಲ್ಲಿ ಬಿಡುಗಡೆ ಮಾಡಿದ ಮೊತ್ತ |
|---|---|---|---|---|---|
| | | ಸಂಖ್ಯೆ | ಒಟ್ಟು ಅಂದಾಜು ಮೊತ್ತ | | |
| 1 | 2 | 3 | 4 | 5 | 6 |
| 1 | ಬಾಗಲಕೋಟೆ | 26 | 1169.00 | 236.50 | 125.00 |
| 2 | ಬೆಂಗಳೂರು ನಗರ | 11 | 550.00 | 323.00 | 0.00 |
| 3 | ಬೆಂಗಳೂರು ಗ್ರಾ | 16 | 570.00 | 261.25 | 120.00 |
| 4 | ಬೆಳಗಾಂ | 25 | 1460.00 | 180.00 | 175.00 |
| 5 | ಬಳ್ಳಾರಿ | 9 | 575.00 | 451.89 | 0.00 |
| 6 | ಬೀದರ್ | 9 | 840.00 | 100.00 | 0.00 |
| 7 | ವಿಜಯಪುರ | 9 | 905.00 | 50.00 | 0.00 |
| 8 | ಚಾಮರಾಜನಗರ | 8 | 475.00 | 280.00 | 50.00 |
| 9 | ಚಿಕ್ಕಮಗಳೂರು | 9 | 400.00 | 131.25 | 40.00 |
| 10 | ಚಿತ್ರದುರ್ಗ | 18 | 850.00 | 373.56 | 25.00 |
| 11 | ದಕ್ಷಿಣ ಕನ್ನಡ* | 22 | 1385.00 | 575.00 | 350.00 |
| 12 | ದಾವಣಗೆರೆ ವಿಭಾಗ | 29 | 1292.00 | 432.00 | 0.00 |
| 13 | ಧಾರವಾಡ | 17 | 980.00 | 788.75 | 100.00 |
| 14 | ಗದಗ | 12 | 1165.00 | 675.43 | 50.00 |
| 15 | ಗುಲ್ಬರ್ಗ | 12 | 1120.00 | 50.00 | 0.00 |
| 16 | ಹಾಸನ | 26 | 698.00 | 197.50 | 0.00 |
| 17 | ಹಾವೇರಿ | 20 | 600.00 | 197.50 | 80.00 |
| 18 | ಕೊಡಗು | 5 | 150.00 | 86.00 | 60.00 |
| 19 | ಕೋಲಾರ | 18 | 580.00 | 175.00 | 0.00 |
| 20 | ಕೊಪ್ಪಳ | 11 | 320.00 | 0.00 | 0.00 |
| 21 | ಮಂಡ್ಯ | 23 | 990.00 | 236.50 | 120.00 |
| 22 | ಮೈಸೂರು | 14 | 600.00 | 0.00 | 0.00 |
| 23 | ರಾಮನಗರ | 4 | 205.00 | 10.00 | 0.00 |
| 24 | ರಾಯಚೂರು | 3 | 130.00 | 10.00 | 0.00 |
| 25 | ಶಿವಮೊಗ್ಗ | 23 | 700.00 | 310.98 | 100.00 |
| 26 | ತುಮಕೂರು | 23 | 995.00 | 0.00 | 50.00 |
| 27 | ಉಡುಪಿ | 14 | 479.00 | 213.00 | 25.00 |
| 28 | ಉತರ ಕನ್ನಡ | 29 | 997.00 | 431.60 | 176.00 |
| 29 | ಯಾದಗಿರಿ | 4 | 200.00 | 85.00 | 0.00 |
| ಒಟ್ಟು | | 449 | 21380.00 | 6861.71 | 1646.00 |

**ಸೂಚನೆ:** ದಕ್ಷಿಣ ಕನ್ನಡ ಜಿಲ್ಲೆಗೆ ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನದಲ್ಲಿ ಸುಳ್ಯ ತಾಲ್ಲೂಕು ಕೊಲ್ಲಮೊಗ್ರು ಗ್ರಾಮದಿಂದ ಬಾಳಗೋಡು ವಯಾ ಬೆಂಡೋಡಿ ಹರಿಹರ ರಸ್ತೆಯಲ್ಲಿ ಸೇತುವೆ ನಿರ್ಮಾಣ ಕಾಮಗಾರಿಯ ಬಾಕಿ ಬಿಲ್ ರೂ.56.70 ಲಕ್ಷಗಳನ್ನು ಪಾವತಿಸುವುದು

(ಡಾ. ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.